## ನಿವೇದನೆ

# ಭಾರತದ ಆತ್ಮವನ್ನು ಬಲಪಡಿಸುವ ಯೋಚನೆ-ಪ್ರಯತ್ನಗಳಿಗಿದು ಸಕಾಲ

ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದರು ಗಾಂಧೀಜಿ. ಹಾಗಾದರೆ, ಭಾರತದ ಹೃದಯ ಎಲ್ಲಿದೆ? ದೇಹದ ಎಲ್ಲೆಡೆಗೆ ರಕ್ತವನ್ನು ಪೂರೈಸುವ ಹೃದಯ ಜೀವಚೈತನ್ಯದ ಮೂಲವಷ್ಟೇ. ಈ ಹಿನ್ನೆಲೆಯಲ್ಲಿ ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುವ ನಗರಗಳನ್ನು ಹೃದಯದ ರೂಪದಲ್ಲಿ ಕಾಣಬಹುದು. ಜೀವನೋಪಾಯಕ್ಕಾಗಿ ಗ್ರಾಮಗಳಿಂದ ಬಹುದೊಡ್ಡ ಸಂಖ್ಯೆಯ ಜನ ನಗರಗಳಿಗೆ ಬರುವುದರಿಂದ ಹಾಗೂ ನಗರಗಳ ಅಗಾಧ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಹಳ್ಳಿಗಳ ಹೃದಯದ ರೂಪದಲ್ಲಿ ಅವುಗಳನ್ನು ಪರಿಭಾವಿಸಬಹುದು. ಆದರೆ, ಕೊರೊನಾ ಸೋಂಕು ನಮ್ಮ ಜಾಗತೀಕರಣ ಸಂದರ್ಭದ ಅನೇಕ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದೆಯಷ್ಟೇ; ಹಾಗೆ ತಪ್ಪಾದ ಲೆಕ್ಕಾಚಾರವೊಂದರ ರೂಪದಲ್ಲಿ ಹಳ್ಳಿ ಮತ್ತು ಗ್ರಾಮಗಳಿಗೆ ಸಂಬಂಧಿಸಿದ ನಮ್ಮ ನಂಬಿಕೆಗಳನ್ನು ನೋಡಬಹುದು. ನಗರಗಳಿಂದ ಹಳ್ಳಿಗಳಿಗೆ ಲಕ್ಷಾಂತರ ಜನ ಹಿಂದಿರುಗಿರುವ ಸಂದರ್ಭವಿದು. ಸಿಕ್ಕ ಸಿಕ್ಕ ವಾಹನಗಳಲ್ಲಿ ತೂರಿಕೊಂಡು ತಂತಮ್ಮ ಊರುಗಳತ್ತ ಮುಖ ಮಾಡಿದವರು ಹಾಗೂ ಮಕ್ಕಳು–ಬ್ಯಾಗುಗಳನ್ನು ಅವುಚಿಕೊಂಡು ಕಾಲ್ನಡಿಗೆಯಲ್ಲಿಯೇ ತವರಿನ ದಾರಿ ಹಿಡಿದವರನ್ನು ನೋಡಿದರೆ, ಹೃದಯದ ಬಳ್ಳಿಗಳೆಲ್ಲ ಹಳ್ಳಿಗಳತ್ತ ತಿರುಗಿರುವಂತಿದೆ.

ಸಂಕಟದ ಸಮಯದಲ್ಲಿ ಹುಟ್ಟಿದೂರು ಹಾಗೂ ಬಂಧುಮಿತ್ರರು ನೆನಪಾಗುವುದು ಮನುಷ್ಯ ಸಹಜ ಸ್ವಭಾವ. ಆ ಕರುಳಿನ ಕರೆಯಿಂದಲೇ ಲಕ್ಷ ಲಕ್ಷ ಜನ ತಮ್ಮೂರುಗಳಿಗೆ ಹೋಗಿದ್ದಾರೆ. ಹಾಗೆ ಹೋದವರಿಗೆ ಸದ್ಯದ ಮಟ್ಟಿಗೆ ಸೂರು ಹಾಗೂ ಅನ್ನ ದೊರೆಯಬಹುದು. ನಂತರದ ದಿನಗಳಲ್ಲಿ ಅವರೆಲ್ಲರಿಗೂ ನೆಮ್ಮದಿಯ ಬದುಕು, ಆ ಬದುಕಿಗೊಂದು ಭದ್ರತೆ ದೊರೆಯುತ್ತದೆಯೇ? ಹೌದು ಎನ್ನುವುದು ಕಷ್ಟ. ಹಳ್ಳಿಗಳಲ್ಲಿ ಬದುಕಿನ ಬಂಡಿ ಸಾಗಲಾರದೆಂದೇ ಈ ಜನ ನಗರಗಳಿಗೆ ವಲಸೆ ಹೋಗಿದ್ದರು. ಈಗವರು ತವರಿಗೆ ಮರಳಿರುವ ಸಂದರ್ಭದಲ್ಲಿ, ಊರುಗಳ ಸ್ವರೂಪವೇನೂ ಬದಲಾಗಿಲ್ಲ. ಹಾಗೆ ನೋಡಿದರೆ, ಹಳ್ಳಿಗಳಲ್ಲಿನ ಸಮಸ್ಯೆಗಳ ಸ್ವರೂಪ ಇನ್ನಷ್ಟು ಬಿಗಡಾಯಿಸಿದೆ.

ಹಳ್ಳಿ ಎನ್ನುವುದು ನಮ್ಮಲ್ಲಿ ಅನೇಕರ ಪಾಲಿಗೆ ಒಂದು ಭಾವುಕ ಸಂಗತಿ. ಊರು ಬಿಟ್ಟರೂ ಊರಿನ ನೆನಪು ನಮ್ಮನ್ನು ಬಿಡುವುದಿಲ್ಲ. ಆ ಕಾರಣದಿಂದಲೇ ಇದ್ದಲ್ಲಿಯೇ ಊರಿನ ಭಾವಕೋಶಗಳನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಮ್ಮೂರು, ಭಾಷೆಗಳ ಜನರೊಂದಿಗೆ ಗುರ್ತಿಸಿಕೊಳ್ಳಲು ಬಯಸುತ್ತೇವೆ. ಈ ಭಾವನಾತ್ಮಕ ಲೋಕದಿಂದಾಚೆಗೆ, ಊರಿನ ಸಾಮಾಜಿಕ–ಆರ್ಥಿಕ ಬದಲಾವಣೆಗೆ ತುಡಿಯುವ ಪ್ರಯತ್ನಗಳು ಕಡಿಮೆ. ಆ ಕಾರಣದಿಂದಾಗಿಯೇ ಹಳ್ಳಿಗಳಿಗೆ ಮುಪ್ಪಡರುತ್ತಿದೆ, ನಗರಗಳು ನಿತ್ಯಯೌವನವನ್ನು ಹೊಂದುವ ಹಂಬಲದ ಪುರು ಮಹಾರಾಜನಂತೆ ಕಾಣಿಸುತ್ತವೆ.

ಹಳ್ಳಿಗಳ ಬಗ್ಗೆ ಭಾವುಕವಾಗಿ ಮಾತನಾಡುವ ನಾವು, ಹಳ್ಳಿಗಳು ತಮ್ಮ ಮೂಲಸ್ವರೂಪದಲ್ಲಿ ಉಳಿದಿವೆಯೇ ಎಂದೂ ಯೋಚಿಸಬೇಕು. ವಸ್ತುನಿಷ್ಠವಾಗಿ ಯೋಚಿಸಿದರೆ ನಾವು ಬಿಟ್ಟುಬಂದ ಊರುಗಳು ಈಗ ಉಳಿದಿರುವುದು ನಮ್ಮ ನೆನಪುಗಳಲ್ಲಷ್ಟೇ. ಹಳ್ಳಿ ಮತ್ತು ನಗರಗಳ ನಡುವಣ ಗೆರೆ ಎಷ್ಟು ತೆಳುವಾಗಿದೆಯೆಂದರೆ – ಯಾವುದು ನಗರ, ಯಾವುದು ಹಳ್ಳಿ ಎಂದು ಸುಲಭಕ್ಕೆ ಹೇಳಲಾಗುವುದಿಲ್ಲ. ಈ ವಿರೋಧಾಭಾಸವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ಹಳ್ಳಿಯ ನೈಜಸ್ವರೂಪದ ಅರಿವು ಅಗತ್ಯ. ಇಷ್ಟಕ್ಕೂ ಹಳ್ಳಿ ಎಂದರೇನು? ಅದು ಸರಳತೆಯ, ಸ್ವಾಭಿಮಾನದ, ಸ್ವಾವಲಂಬನೆಯ ಸಂಕೇತ. ಸಂಬಂಧಗಳನ್ನು ಮೌಲ್ಯವಾಗಿ ಭಾವಿಸುವ ಸಾಮಾಜಿಕ ಸಂರಚನೆ. ಸರಳ ಜೀವನ ಮತ್ತು ಉನ್ನತ ಚಿಂತನೆ ಅಲ್ಲಿಯ ಮೂಲಧಾತು. ಈ ಗುಣಗಳನ್ನು ನಾವು ಇಂದು ಹಳ್ಳಿಗಳೆಂದು ಭಾವಿಸುತ್ತಿರುವ ರಚನೆಗಳಲ್ಲಿ ಕಾಣಬಹುದೆ?

ಭಾರತದ ಆತ್ಮವನ್ನು ಹಳ್ಳಿಗಳಲ್ಲಿ ಗುರ್ತಿಸಿದ ಗಾಂಧೀಜಿಯೇ ಹೇಳಿದ ಮತ್ತೊಂದು ಮಾತು: ‘ಭಾರತದ ಅರ್ಥವ್ಯವಸ್ಥೆ ಗ್ರಾಮಸ್ವಾವಲಂಬನೆಯ ಆಧಾರದ ಮೇಲೆ ರೂಪುಗೊಳ್ಳಬೇಕು. ಪ್ರತಿ ಹಳ್ಳಿ ತನಗೆ ಬೇಕಾದ ವಸ್ತುಗಳನ್ನು ತಾನೇ ಉತ್ಪಾದಿಸಿಕೊಳ್ಳಬೇಕು. ಆರೋಗ್ಯರಕ್ಷಣೆ, ನೈರ್ಮಲ್ಯ ಹಾಗೂ ಗ್ರಾಮರಕ್ಷಣೆಯನ್ನು ಆಯಾ ಹಳ್ಳಿಗರೇ ವಹಿಸಿಕೊಳ್ಳಬೇಕು. ಪ್ರತಿ ಗ್ರಾಮ ಸ್ವಾವಲಂಬಿ ಘಟಕವಾದಾಗ, ಭಾರತ ಸ್ವಾವಲಂಬಿ ಗ್ರಾಮಘಟಕಗಳ ಅಜೇಯ ಗಣರಾಜ್ಯವಾಗುತ್ತದೆ.’ ಗಾಂಧೀಜಿ ಹೇಳಿದ ಸ್ವಾವಲಂಬಿ ಘಟಕಗಳ ರೂಪದಲ್ಲಿ ಇಂದಿನ ಹಳ್ಳಿಗಳಿವೆಯೇ?

ವಿವೇಕಶೂನ್ಯ ಹಾಗೂ ನೈತಿಕತೆಯಿಂದ ದೂರವಾದ ರಾಜಕಾರಣ ನಮ್ಮ ಹಳ್ಳಿಗಳನ್ನು ಪರಪುಟ್ಟಗಳನ್ನಾಗಿಸಿದೆ. ಭ್ರಷ್ಟ ರಾಜಕಾರಣದ ಫಲವಾಗಿ, ಈವರೆಗೂ ಆಕಾಶದತ್ತ ನಿರೀಕ್ಷೆಯ ಕಣ್ಣುಗಳನ್ನು ನೆಡುತ್ತಿದ್ದ ಗ್ರಾಮೀಣರು, ಈಗ ತಮ್ಮ ಕಣ್ಣೊಂದನ್ನು ನಗರಗಳತ್ತಲೂ ನೆಟ್ಟಿದ್ದಾರೆ. ಈ ವೈರುಧ್ಯವೇ ಹಳ್ಳಿಗಳ ಜೀವದ್ರವ್ಯವನ್ನು ಬರಿದಾಗಿಸುತ್ತ, ಅವುಗಳನ್ನು ನಗರಗಳ ಪಳೆಯುಳಿಕೆಗಳಾಗಿಸಿವೆ. ಪ್ರಸಕ್ತ ಆತಂಕದ ಸಂದರ್ಭದಲ್ಲಿ ನಗರಗಳೆಲ್ಲ ಹಳ್ಳಿಗಳ ದಾರಿ ಹಿಡಿದಿರುವಾಗ, ಹಳ್ಳಿಗಳಿಗೆ ಪೊರೆಯುವ ಮಾತೃಗುಣವನ್ನು ಮರಳಿ ತಂದುಕೊಡಬೇಕಾದ ಸಾಧ್ಯತೆಗಳ ಬಗ್ಗೆ ಯೋಚಿಸಬೇಕಾಗಿದೆ. ಇದು ಅಂತರ್ಜಲವನ್ನು ಮರುಪೂರಣಗೊಳಿಸಬೇಕಾದಷ್ಟೇ ಅಗತ್ಯವಾದ ಕೆಲಸ.

■ ರಘುನಾಥ ಚ.ಹ.

ಹಳ್ಳಿ ಎಂದರೇನು? ಅದು ಸರಳತೆಯ, ಸ್ವಾಭಿಮಾನದ, ಸ್ವಾವಲಂಬನೆಯ ಸಂಕೇತ. ಸಂಬಂಧಗಳನ್ನು ಮೌಲ್ಯವಾಗಿ ಭಾವಿಸುವ ಸಾಮಾಜಿಕ ಸಂರಚನೆ. ಸರಳ ಜೀವನ ಮತ್ತು ಉನ್ನತ ಚಿಂತನೆ ಅಲ್ಲಿಯ ಮೂಲಧಾತು. ಈ ಗುಣಗಳನ್ನು ನಾವು ಇಂದು ಹಳ್ಳಿಗಳೆಂದು ಭಾವಿಸುತ್ತಿರುವ ರಚನೆಗಳಲ್ಲಿ ಕಾಣಬಹುದೆ?



ಈಶ್ವರ್